Roads in Basavana Bagewadi

1047 SRI B. S. PATIL (Huvinhipparagi).— Will the Minister for Public Works be pleaed to state:—

(a) the length of roads (in K.Ms) formed in Basavana Bagewadi so far; out of them, the length of roads (in KMs) under the control of Public Works Department and of these the length of roads (in KMs) which are fit for traffic throughout the year.

(b) the length of roads (K.Ms.) under the control of Taluk Development Boards Basavana Bagewadi;

(c) whether the Government has not realised that the Taluk Development Boar is which is facing accute financial difficulties for disbursing salary to its staff is not in a position to repair the roads;

(d) the length of roads (in K.Ms.) formed under scarcity relie works roads in Basavana Bagewadi taluk and the authority that owns them now ?

SRI S. BANGARAPPA (Minister for Public Works).—

(a) (1) A length of 77.6 K.M. roads have been constructed in Basavana Bagewadi taluk as per the figures published on the 31st January 1979.

(2) 536 K.Ms.

(3) 301 K.Ms.

(b) 142.6 K.Ms.

(c) Yes.

(d) A lenght of 581.7 K.M. roads under the scarcity relief works constructed in Basavana Bagewadi taluk during the period 1959-73. Ownership of these roads are as follows.—

(1)	P.W.D. maintained State Fund Roads.	125.8 K.Ms.
(2)	Roads included under I.C.R.C. Scheme	83.7 K.Ms.
(3)	Taluk Development Board Roads	112.2 Kms.
(4)	Upper Krishna Project Roads.	4.0 Kms.
(5)	Other remaining Roads.	256.0 Kms.
	Total	581,7 Kms.

ಶ್ರೀ ಬಿ. ಎಸ್. ಪಾಟೀಲ್.—ಸ್ವಾಮಿ ನನ್ನ 'ಅ' ಪ್ರಶ್ನೆಗೆ ಉತ್ತರವಾಗಿ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ಅಧೀನದಲ್ಲಿರುವ ರಸ್ತೆಗಳು ೫೫೬ ಕಿ. ಮೀ. ಎಂದು ಹೇಳಿದ್ದೀರಿ. ಮತ್ತು ಅವುಗಳಲ್ಲಿ ೧೨ ತಿಂಗಳು ಓಡಾಟಕ್ಕೆ ಯೋಗ್ಯವಾದ ರಸ್ತೆಗಳು ೩೦೦ ಕಿ. ಮೀ. ಎಂದು ತಿಳಿಸಿದ್ದೀರಿ. ಆದರೆ ಈ ರಸ್ತೆ ೧೨ ತಿಂಗಳ ಓಡಾಟಕ್ಕೆ ಯೋಗ್ಯವಾಗಿಲ್ಲ. ಬಿಜಾಪುರದಿಂದ ಬಾಗಲ

ಕೋಟಿಯ ಕಡೆಗೆ ಈ ರಸ್ತೆಯಲ್ಲಿ ೨೫-೩೦ ಬಸ್ಸುಗಳು ಒಂದು ದಿವಸದಲ್ಲಿ ಓಡಾಡುತ್ತವೆ. ಇದಕ್ಕೆ ಟಾರನ್ನು ಹಾಕಿದ್ದಾರೆ. ಆದರೆ ರಸ್ತೆಯಲ್ಲಿ ಮನುಷ್ಯರೂ ಓಡಾಡುವುದಕ್ಕೆ ಯೋಗ್ಯವಾಗಿಲ್ಲ. ಮಾನ್ಯ ಮಂತ್ರಿಗಳು ಆ ಕಡೆ ಪ್ರವಾಸ ಬಂದಾಗ ಬೇಕಾದರೆ ಇದನ್ನು ನೋಡಬಹುದು. ಇನ್ನು ಮಿಕ್ಕ ೨೩.೫ ಕಿ. ಮಿ. ರಸ್ತೆಯನ್ನು ೧೨ ತಿಂಗಳೂ ಓಡಾಟಕ್ಕೆ ಯೋಗ್ಯವಾದ ರಸ್ತೆಯನ್ನಾಗಿ ಮಾಡುವ ಯೋಜನೆ ಇದೆ ಎಂದು ತಿಳಿದು ಬಂದಿದೆ. ಅದನ್ನು ಯಾವಾಗ ಮಾಡುಸುತ್ತೀರಾ ?

†ಶ್ರೀ ಎಸ್. ಬಂಗಾರಪ್ಪ.—ಈ ೩೦೧ ಕಿ. ಮಿ. ರಸ್ತೆ ಏನಿದೆ ಇದು ೧೨ ತಿಂಗಳು ಓಡಾಟಕೆಗೆ ಯೋಗ್ಯವಾಗಿಲ್ಲ ಎಂದು ತಿಳಿಸಿದ್ದಾರೆ. ನನಗೆ ಬಂದ ವರದಿ ಪ್ರಕಾರ ಇವು ೧೨ ತಿಂಗಳ ಓಡಾಟಕೆಗೆ ಯೋಗ್ಯವಾದ ರಸ್ತೆಗಳು ಎಂದು ಗೊತ್ತಾಗಿದೆ. ಹಾಗೇನಾದರೂ ಯಾವ ಭಾಗದಲ್ಲಿ ಆ ರಸ್ತೆ ಓಡಾಟಕ್ಕೆ ಯೋಗ್ಯವಾಗಿಲ್ಲ ಎನ್ನುವ ವಿವರಗಳನ್ನು ಕಳುಹಿಸಿದರೆ ನಾನು ಅದನ್ನು ನೋಡಿಸುತ್ತೇನೆ. ಇನ್ನು ಉಳಿದ ರಸ್ತೆಯನ್ನು ೧೨ ತಿಂಗಳ ಓಡಾಟಕ್ಕೆ ಯೋಗ್ಯವನ್ನಾಗಿ ಯಾವಾಗ ಮಾಡುತ್ತೀರಾ ಎಂದು ಕೇಳಿದ್ದಾರೆ ಅದರ ಬಗ್ಗೆ ಹೇಳುವುದಾದರೆ ಹಣದ ಲಭ್ಯತೆಯನ್ನು ನೋಡಿಕೊಂಡು ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲಿ ಎಷ್ಟೆಷ್ಟು ರಸ್ತೆಗಳನ್ನು ಈಗ ರಿಪೇರಿ ಮಾಡುವುದಕ್ಕೆ ತೆಗೆದುಕೊಳ್ಳುಬಹುದು ಎನ್ನುವ ಬಗ್ಗೆ ವಿಚಾರ ಮಾಡಲು ಆ ಕಡೆ ಪ್ರವಾಸ ಬರುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಸ್. ಪಾಟೀಲ್.—ನನ್ನ 'ಇ' ಪ್ರಶ್ನೆಯಲ್ಲಿ ಸಿಬ್ಬಂದಿಗೆ ಪಗಾರ ಕೊಡಲು ಹಣವಿಲ್ಲದೆ ಅತೀವ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವ ತಾಲ್ಲೂಕು ಬೋರ್ಡ್, ಆ ರಸ್ತೆಗಳ ದುರಸ್ತಿ ಮಾಡಲು ಸಾಧ್ಯವಿಲ್ಲ ಎಂಬುದು ಸರ್ಕಾರ ಮನಗಂಡಿಲ್ಲವೇ ಎಂದು ಕೇಳಿದ್ದಕ್ಕೆ 'ಹೌದು' ಉತ್ತರ ಕೊಟ್ಟಿದ್ದೀರಿ. ಆ ರೀತಿ 'ಹೌದು' ಎಂದು ಉತ್ತರ ಕೊಟ್ಟಾಕ್ಷಣಕ್ಕೆ ಸಮಸ್ಯೆ ಪರಿಹಾರ ಆಗುವುದಿಲ್ಲ. ಆ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಂಡು ಒಳ್ಳೆಯ ಪರಿಸ್ಥಿತಿಯಲ್ಲಿ ಇಡುವುದಕ್ಕೆ ಸರ್ಕಾರದವರು ವಿಚಾರ ಮಾಡುತ್ತೀರಾ ? ಮತ್ತು ಯಾವಾಗ ಅದನ್ನು ಮಾಡುತ್ತೀರಾ ?

ಶ್ರೀ ಎಸ್ ಬಂಗಾರಪ್ಪ.—ನಿಮ್ಮ 'ಇ' ಪ್ರಶ್ನೆಗೆ 'ಹೌದು' ಎಂದು ಉತ್ತರ ಕೊಟ್ಟಿದ್ದೇವೆ. ಈ ಕೆಲಸವನ್ನು ಯಾವಾಗ ತೆಗೆದುಕೊಂಡು ಮುಗಿಸುತ್ತೀರಾ ಎನ್ನುವ ಬಗ್ಗೆ ನಾನು ಪಬ್ಲಿಕ್ ವರ್ಕ್ಸ್ ಇಲಾಖೆಗೆ ಸಂಬಂಧಪಟ್ಟ ಡಿಮ್ಯಾಂಡ್‌ಗೆ ಉತ್ತರ ಕೊಡುವಾಗಲೇ ಹೇಳಿದ್ದೇನೆ.

ಈಗಾಗಲೇ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿದ್ದೇವೆ. ಆದರಲ್ಲಿ ತಾಲ್ಲೂಕ್ ಆಫೀಸ್‌ವ್ಯಿದ್ದ ಮಂಡಲಿ ಹಾಗೂ ಪುಚಾಯಿತಿಗೆ ಸೇರಿರತಕ್ಕ ರಸ್ತೆಗಳು ಮತ್ತು ಮೇಜರ್ ಡಿಸ್ಟ್ರಿಕ್ಟ್ ರೋಡ್ಸ್, ಅದರ್ ಡ್ಯಾನ್ ಡಿಸ್ಟ್ರಿಕ್ಟ್ ರೋಡ್ಸ್ ಎಲ್ಲವನ್ನು ಸೇರಿಸಿಕೊಂಡು ಪಂತಪಂತವಾಗಿ ತಯಾರು ಮಾಡಬೇಕೆಂದು ಮಾಸ್ಟರ್ ಪ್ಲಾನ್ ತಯಾರು ಮಾಡಿದ್ದೇವೆ. ಅದರಲ್ಲಿ ತಾವು ಬೇಕಿದ ರಸ್ತೆ ಏನಿದೆ ಅದೂ ಸೇರಿಕೊಂಡಿದೆ.

ಶ್ರೀ ಬಿ. ಎಸ್. ಪಾಟೀಲ್.—ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ೫೮೧.೭ ಕಿ. ಮೀ. ರಸ್ತೆಗಳನ್ನು ಬರಗಾಲ ಕಾಮಗಾರಿಯಲ್ಲಿ ೧೯೫೨-೫೩ರ ಅವಧಿಯಲ್ಲಿ ನಿರ್ಮಿಸಲಾಯಿತು ಎಂದು ಹೇಳಿದ್ದೀರಿ ಹಾಗೂ ಉಳಿದವು ೨೫೭ ಕಿ. ಮಿ ಎಂದು ಹೇಳಿದ್ದೀರಿ. ಈ ಉಳಿದವುಗಳು ಯಾರ ಮಾಲೀಕತ್ವದಲ್ಲಿ ಇವೆ? ಮತ್ತು ಈ ಬರಗಾಲ ಕಾಮಗಾರಿಯಲ್ಲಿ ಮಾಡಿದ ರಸ್ತೆಗಳು ಏನಿವೆ ಅವು ಎರೆ ಮಣ್ಣಿನ ರಸ್ತೆಗಳಾಗಿವೆ. ಅವುಗಳನ್ನು ಸರಿಯಾಗಿ ದುರಸ್ತಿ ಮಾಡದಿದ್ದರೆ ಅವು ಒಂದೆರಡು ವರ್ಷಗಳಲ್ಲಿ ಕರಗಿ ಹೋಗುತ್ತವೆ. ಆದ್ದರಿಂದ ಸರ್ಕಾರದವರು ಅದಕ್ಕೆ ವಿಚಾರ ಮಾಡಿದ ಹಣ ವ್ಯರ್ಥವಾಗಿ ಹೋಗುತ್ತವೆ. ಅದಕಾರಣ ಪರಿಹಾರ ಕಾಮಗಾರಿಯಲ್ಲಿ ಮಾಡಿರತಕ್ಕ ರಸ್ತೆಗಳು ಏನಿವೆ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಉತ್ತಮ ರಸ್ತೆಗಳನ್ನಾಗಿ ಪರಿವರ್ತನೆ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನಮ್ಮ ಇಲಾಖೆಯ ಬೇಡಿಕೆಯ ಚರ್ಚೆಯ ಕಾಲದಲ್ಲಿ ಇದರ ಬಗ್ಗೆ ನಾನು ಹೇಳಿದ್ದೇನೆ. ಈ ರಸ್ತೆಗಳನ್ನು ದುರಸ್ತಿ ಮಾಡುವ ಬಗ್ಗೆ ಮಲೆನಾಡಿನಲ್ಲಿ ಯಾವ ರೀತಿ ವೇಟೇಜ್ ಕೊಟ್ಟು ಈ ರಸ್ತೆಯನ್ನು ಮಾಡಿಸಿದ್ದೇವೋ ಅದೇ ರೀತಿ ಎರೆಮಣ್ಣಿನ ರಸ್ತೆಗಳಿಗೂ ವೈಟೇಜ್ ಕೊಟ್ಟು ಮಾಡಿಸಬೇಕೆನ್ನುವ ಉದ್ದೇಶ ಇದೆ ಈ ಒಂದು ತತ್ವ ಪ್ರಕಾರ ೭೬-೭೭ನೇ ಸಾಲಿನಲ್ಲಿ ಕೆಲವು ಪ್ರದೇಶಗಳಿಗೆ ವೇಟೇಜ್ ಕೊಟ್ಟಿದ್ದೇವೆ. ಅದೇ ರೀತಿ ಬಸವನಬಾಗೇವಾಡಿ ರಸ್ತೆಗೂ ಸಹಾಯ ಕೊಡಬೇಕೆಂದು ಸರ್ಕಾರದ ಗಮನದಲ್ಲಿದೆ. ಹಣದ ಲಭ್ಯತೆಯನ್ನು ನೋಡಿಕೊಂಡು ಆ ರೀತಿ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಉಳಿದ ೨೫೭ ಕಿ. ಮಿ. ರಸ್ತೆ ಯಾವುದು ಎಂದರೆ ವಿಲೇಜ್ ರೋಡ್ಸ್ ಹಾಗೂ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸೇರಿದ್ದು ಇತ್ಯಾದಿಗಳು ೧ ಕಿ. ಮಿ. ೧೯ ಕಿ. ಮಿ. ಇರುತ್ತವೆ. ಅದಕ್ಕೂಸ್ಕರ ಅವುಗಳನ್ನು ಉಳಿದವು ಎಂದು ಹೇಳಿದ್ದೇವೆ.